★ ಸಸಿತೋಟ




ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ನಡೆಯುವ ‘ಡಿಸ್ಕೊ ಗ್ರಾಸರಿ ಪಾರ್ಟಿ’. ಸೂಪರ್ ಮಾರುಕಟ್ಟೆಯಲ್ಲಿ ರಾತ್ರಿ ವಹಿವಾಟು ಮುಗಿದ ನಂತರ ಇಂಥವರಿಗಾಗಿ ಒಂದು ಗಂಟೆ ಬಿಟ್ಟುಕೊಡುತ್ತಾರಂತೆ. ಸಾಮಾನು ಖರೀದಿಸುವ ಜೊತೆಗೆ ಕುಡಿತ, ಕುಣಿತದ ಮನರಂಜನೆ. ಸೂಪರ್ ಮಾರುಕಟ್ಟೆಯವರಿಗೆ ಎರಡು ರೀತಿಯಲ್ಲಿ ಲಾಭ.




ಲಂಡನ್‌ನಲ್ಲಿ ಹೀಗೊಂದು ಬೃಹತ್ ಜಾಹೀರಾತು ಫಲಕ ಹಾಕಲಾಗಿದೆ. ಬಿಯರ್ ಬದಲು ಪೋಸ್ಟರ್ ಎಂದು ಜಾಣತನದಿಂದ ತೋರಿಸಲಾಗಿದೆ. ಆದರೆ ಈ ಬೃಹತ್ ಭಿತ್ತಿಪತ್ರಕ್ಕೆ ನಲ್ಲಿಯೊಂದಿದ್ದು ಬಿಟ್ಟಿ ಬಿಯರ್ ಕುಡಿಯಬಹುದು. ಬಿಯರ್ ಕಂಪೆನಿಯ ಜಾಹೀರಾತು ತಂತ್ರ ಹೇಗಿದೆ ನೋಡಿ.

ಚೀನಾದ ಯುವಾನ್‌ಗೆ ಚಿಕ್ಕ ಅಪಘಾತವಾಗಿ ಆಸ್ಪತ್ರೆ ಸೇರಿದ. ಆಸ್ಪತ್ರೆಯಲ್ಲಿ ದೊಡ್ಡ ಅಪಘಾತವೇ ಕಾದಿತ್ತು. ಆತನ 17 ಮಂದಿ ನಲ್ಲೆಯರು ಅಲ್ಲಿಗೆ ಭೇಟಿ ನೀಡಿದಾಗ ಆತನ ಗುಟ್ಟು ಹೊರಬಿತ್ತು. ಪರಸ್ಪರ ಗೊತ್ತಾಗದಂತೆ 17 ಯುವತಿಯರ ಜೊತೆ ಪ್ರಣಯದಾಟ ನಡೆಸುತ್ತಿದ್ದ ಯುವಾನ್ ಪ್ರತಿಯೊಬ್ಬರಿಂದಲೂ ಹಣ ಪಡೆಯುತ್ತಿದ್ದನಂತೆ. ಪಾಪ, ವೈದ್ಯರು ಅವನ ಕುಟುಂಬ ಸದಸ್ಯರು ಎಂದುಕೊಂಡು ಮೊಬೈಲ್‌ನಲ್ಲಿದ್ದ ನಂಬರ್‌ಗಳಿಗೆ ಫೋನ್ ಮಾಡಿ ಕರೆಸಿದ್ದರಂತೆ.




ಇಂಗ್ಲೆಂಡ್‌ನ ಜೋಶ್ ಪಾರ್ಟಿಯೊಂದರಲ್ಲಿ ಕುಡಿದು ಚಿತ್ತಾಗಿದ್ದ. ಎರಡು ದಿನಗಳ ನಂತರ ಕನ್ನಡಿಯಲ್ಲಿ ಬೆನ್ನು ನೋಡಿಕೊಂಡರೆ ಈ ರೀತಿ ಹಚ್ಚೆ ಹಾಕಿದ್ದು ನೋಡಿ ಬೆಚ್ಚಿಬಿದ್ದನಂತೆ. ನಿಕಟ ಸ್ನೇಹಿತ ಮಾಡಿದ ಕೀಟಲೆಯಿಂದ ಇನ್ನು ಮುಂದೆ ಜೋಶ್ ಮುಖ ಕೆಳಗೆ ಹಾಕಿ ಮಲಗುವ ಹಾಗೇ ಇಲ್ಲ, ಆ್ಯಂಬುಲೆನ್ಸ್ ಸೈರನ್ ಮೊಳಗುತ್ತದೆ.

ಪುರುಷನ ಸೌಂದರ್ಯಕ್ಕೆ ಯಾವುದೇ ಏಕರೂಪ ಮಾನದಂಡಗಳಿಲ್ಲ ಎಂದು ಡಾರ್ವಿನ್ ಹೇಳಿದ್ದನಂತೆ. ಆದರೆ ಸಂಶೋಧನೆಯೊಂದು ಪುರುಷನ ಮುಖ ಯಾವ ರೀತಿ ಇದ್ದರೆ ಸೌಂದರ್ಯದಿಂದ ಕಂಗೊಳಿಸುತ್ತದೆ ಎಂದು ಕಂಡು ಹಿಡಿದಿದೆಯಂತೆ. ಮುಖದ ಎರಡೂ ಕಡೆಗಳ ಅಳತೆ ಸಮ (ಸಿಮೆಟ್ರಿಕಲ್) ನಾಗಿದ್ದರೆ, ಯುವತಿಯರು ಮುಗಿ ಬೀಳುವರಂತೆ. ಹಾಗೆಯೇ ಬಹು ದೂರ ಓಡುವ ಓಟಗಾರರೆಂದರೆ ಹೆಂಗಳೆಯರಿಗೆ ಆಕರ್ಷಣೆಯಂತೆ. ಮುಖವನ್ನು ಪ್ಲಾಸ್ಟಿಕ್ ಸರ್ಜರಿಯಿಂದ ಸರಿಪಡಿಸಿಕೊಂಡು, ರನ್ನಿಂಗ್ ಶೂ ಖರೀದಿಸಿ ಸಜ್ಜಾಗಬಹುದು.




ಟರ್ಕಿಯ ಈ ವ್ಯಕ್ತಿ ಕುಬ್ಜ ಕಾರಿನಲ್ಲಿ ಆರಾಮವಾಗಿ ಸರ್ಕಿಟ್ ಹೊಡೆಯುತ್ತಿದ್ದಾನೆ. ಜರ್ಮನಿಯ ಮೋಟಾರ್ ಕಂಪೆನಿ ತಯಾರಿಸಿರುವ ಈ ಕಾರನ್ನು ಸಂಚಾರ ದಟ್ಟಣೆಯಲ್ಲಿ ತಲೆಯ ಮೇಲಿಟ್ಟುಕೊಂಡು ಸಾಗಬಹುದು. ಟ್ರಾಫಿಕ್ ಜಾಮ್ ಎಂದು ದೂರುವ ಹಾಗೇ ಇಲ್ಲ.